## ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಕೆ.ಆರ್. ವೃತ್ತ, ಬೆಂಗಳೂರು.
ದೂರವಾಣಿ: 91-080-22212408
ಫ್ಯಾಕ್ಸ್ : 91-080-22277528

---

ದಿನಾಂಕ: 23-12-2008

ಸಂಖ್ಯೆ: ತಾಂ /ಆಡಳಿತ/9/2008-09

## ಸುತ್ತೋಲೆ

ವಿಷಯ: ನಶಿಸಿಹೋದ ಟಿಪ್ಪಣಿಗಳ ಪುನರ್ ನಿರ್ಮಾಣ, ಹದ್ದುಬಸ್ತು ಅಳತೆ ಮತ್ತು ಸಿ.ಸಿ.ಡಬ್ಲ್ಯು ಅಳತೆ ಪ್ರಕರಣಗಳ ನಿರ್ವಹಣೆ ಬಗ್ಗೆ.

ಉಲ್ಲೇಖ: ಸಂಖ್ಯೆ: ತಾಂ.ಆಡಳಿತ/ಸುತ್ತೋಲೆ/04/2008-09, ದಿನಾಂಕ 06.10.2008.
10

★★★

ಉಲ್ಲೇಖಿತ ಇಲಾಖೆಯ ಸುತ್ತೋಲೆಯಲ್ಲಿ ಭೂಮಾಪಕರನ್ನು ವಿವಿಧ ಕಾರ್ಯಕ್ರಮ / ಯೋಜನೆಗಳನ್ನು ಆಧರಿಸಿ ಕಾರ್ಯ ಹಂಚಿಕೆ ಮಾಡುವಂತೆ ಸೂಚನೆ ನೀಡಲಾಗಿದೆ. ರಾಜ್ಯದ ಕೆಲವು ತಾಲ್ಲೂಕುಗಳಲ್ಲಿ ಈಗಾಗಲೇ " ಮೋಜಣಿ " ತಂತ್ರಾಂಶವನ್ನು ಅಳವಡಿಸಿ, ಪರವಾನಗಿ ಭೂಮಾಪಕರ ಕಾರ್ಯಗಳ ವ್ಯವಸ್ಥಿತ ನಿರ್ವಹಣೆಗೆ ಕ್ರಮ ಜರುಗಿಸಲಾಗಿದ್ದು, ಇನ್ನುಳಿದ ತಾಲ್ಲೂಕುಗಳಲ್ಲಿಯೂ ಕೆಲವೇ ದಿನಗಳಲ್ಲಿ ಈ ಕಾರ್ಯವನ್ನು ಅಳವಡಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗುತ್ತಿದೆ. ಈ ತಂತ್ರಾಂಶ ಅಳವಡಿಸಿದ ನಂತರ 11 ಇ ನಕ್ಷೆ ಕೋರಿಕೆಯ ಅರ್ಜಿಗಳನ್ನು ಪರವಾನಗಿ ಭೂಮಾಪಕರುಗಳಿಗೆ ವಿತರಿಸುವ ಮುನ್ನ ಟಿಪ್ಪಣಿ, ಖರಾಬು ವಿವರಗಳು ಮತ್ತು ಆಕಾರಬಂದ್ ಮಾಹಿತಿ ಲಭ್ಯವಿಲ್ಲದಿದ್ದಲ್ಲಿ ಅರ್ಜಿಯು ಭೂದಾಖಲೆಗಳ ಉಪ ನಿರ್ದೇಶಕರು Login ಗೆ ವರ್ಗಾಹಿಸಲಾಗುತ್ತದೆ, ಈ ರೀತಿ ವರ್ಗಾವಣೆ ಆದ ಅರ್ಜಿಗಳನ್ನು ಅಗತ್ಯ ಮಾಹಿತಿ ಒದಗಿಸಿದ ನಂತರವೇ ಅಳತೆಗೆ ವಿತರಿಸಬೇಕಾಗುತ್ತದೆ. ಆಕಾರಬಂದ್ ಮತ್ತು ಖರಾಬು ವಿವರಗಳನ್ನು ಕಛೇರಿಯಲ್ಲಿರುವ ದಾಖಲೆಗಳ ಆಧಾರವಾಗಿಯೇ ವಿಳಂಬವಿಲ್ಲದೇ ಸಿದ್ಧಪಡಿಸಿ ವಿತರಿಸಬಹುದು. ಆದರೆ, ಟಿಪ್ಪಣಿಗಳು ಇಲ್ಲದಿದ್ದಲ್ಲಿ ಅವುಗಳ ಪುನರ್ ನಿರ್ಮಾಣ ಮಾಡುವ ಕೆಲಸವನ್ನು ಎರಡು ರೀತಿಯಲ್ಲಿ ನಿರ್ವಹಿಸಬಹುದು. ಪರ್ಯಾಯ ದಾಖಲೆಗಳಾದ ಪಕ್ಕಾ ಪುಸ್ತಕದಲ್ಲಿ ಅಗತ್ಯವಾದ ಸರ್ವೆ ನಂಬರಿಗೆ ಕಛೇರಿಯಲ್ಲಿ ವಿವರಗಳು ಲಭ್ಯವಿದ್ದಲ್ಲಿ ಕಛೇರಿಯಲ್ಲಿಯೇ ಸಿದ್ಧಪಡಿಸಿ ಒದಗಿಸಬಹುದು. ಪರ್ಯಾಯ ದಾಖಲೆಗಳು ಇಲ್ಲದಿದ್ದಲ್ಲಿ ಜಮೀನಿಗೆ ಭೇಟಿ ನೀಡಿ ಅಳತೆ ಮೂಲಕ ಟಿಪ್ಪಣಿ ಪುನರ್ ನಿರ್ಮಾಣ ಮಾಡಬೇಕಾಗುತ್ತದೆ.

ಇದಲ್ಲದೇ ರಾಜ್ಯದ ಹಲವು ತಾಲ್ಲೂಕುಗಳಲ್ಲಿ ಡಿಸೆಂಬರ್, ಜನವರಿ, ಫೆಬ್ರವರಿ ತಿಂಗಳಿನಲ್ಲಿ ಬೆಳೆ ಕಟಾವು ಆದ ನಂತರ ಹದ್ದುಬಸ್ತು ಪ್ರಕರಣಗಳಿಗೆ ಹೆಚ್ಚಿನ ಬೇಡಿಕೆ ಮತ್ತು ತ್ವರಿತ ಅಳತೆಗೆ ಒತ್ತಡಗಳು ಬರುತ್ತಿರುವ ವಿಚಾರವನ್ನು ಇಲಾಖೆಯು ಪರಿಗಣಿಸಿದೆ. ಹಾಗೂ ಕೆಲವು ಭೂದಾಖಲೆಗಳ ಉಪ ನಿರ್ದೇಶಕರುಗಳು ಕೋರ್ಟ್ ಕಮೀಷನ್ ಅಳತೆ ಪ್ರಕರಣ ನಿರ್ವಹಣೆ ಮಾಡಲು ಉಲ್ಲೇಖಿತ ಸುತ್ತೋಲೆಯಲ್ಲಿ ಭೂಮಾಪಕರನ್ನು ಒದಗಿಸಿಲ್ಲವೆಂದು ತಿಳಿಸಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಭೂಮಾಪಕರ ಕಾರ್ಯ ಹಂಚಿಕೆಯಲ್ಲಿ ಸೂಕ್ತ ಮಾರ್ಪಾಟು ಮಾಡುವುದು ಅಗತ್ಯವೆಂದು ನಿರ್ಧರಿಸಿ ಈ ಕೆಳಗಿನ ಮಾರ್ಗ ಸೂಚಿಗಳನ್ನು ನೀಡಲಾಗಿದೆ.

ನಶಿಸಿಹೋದ / ಲಭ್ಯವಿಲ್ಲದ ಟಿಪ್ಪಣಿಗಳನ್ನು ಪುನರ್ ನಿರ್ಮಾಣ ಮಾಡುವ ಕಾರ್ಯಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಸೂಚನೆಗಳನ್ನು ನೀಡಲಾಗಿದೆ. ಕಛೇರಿಯಲ್ಲಿಯೇ ಲಭ್ಯವಿರುವ ಪರ್ಯಾಯ ದಾಖಲೆಗಳ ಆಧಾರವಾಗಿ ಟಿಪ್ಪಣಿಗಳ ಪುನರ್ ನಿರ್ಮಾಣಕ್ಕೆ ಪರವಾನಗಿ ಭೂಮಾಪಕರ

ಅಥವಾ ನಿವೃತ್ತ ಭೂಮಾಪಕರ ಸೇವೆಯನ್ನು ಬಳಸಿಕೊಳ್ಳುವುದು. ಹಾಗೂ ಈ ರೀತಿ ಪುನರ್ ನಿರ್ಮಾಣವಾದ ಟಿಪ್ಪಣಿಯು ಪರಿಶೀಲನೆಯ ನಂತರ ಅಂಗೀಕರಿಸಿದ ನಂತರ ಪ್ರತಿ ಟಿಪ್ಪಣಿಗೆ ರೂ. ೨೫-೦೦ ರಂತೆ ಪರವಾನಗಿ ಭೂಮಾಪಕರು / ನಿವೃತ್ತ ಭೂಮಾಪಕರು ಇವರಿಗೆ ನೀಡುವುದು.

ಸ್ಕ್ಯಾನಿಂಗ್ ಕಾರ್ಯಕ್ಕೆ ಪ್ರತಿ ತಾಲ್ಲೂಕಿಗೆ ಕಾರ್ಯ ಹಂಚಿಕೆ ಮಾಡಿರುವ ಇಬ್ಬರು ಭೂಮಾಪಕರನ್ನು ಈ ಯೋಜನೆ ಪ್ರಾರಂಭವಾಗುವವರೆಗೂ ಹದ್ದುಬಸ್ತು ಪ್ರಕರಣಗಳಿಗೆ ಉಪಯೋಗಿಸುವುದು. ಸ್ಕ್ಯಾನಿಂಗ್ ಯೋಜನೆ ಪ್ರಾರಂಭವಾದ ನಂತರವೂ ಒಬ್ಬ ಭೂಮಾಪಕರನ್ನು ಮಾತ್ರ ಈ ಕಾರ್ಯಕ್ಕೆ ಬಳಸುವುದು ಮತ್ತು ಸ್ಕ್ಯಾನಿಂಗ್ ಕಾರ್ಯಕ್ಕೂ ಪ್ರತಿ ತಾಲ್ಲೂಕಿನಲ್ಲಿಯೂ ಒಬ್ಬ ಪರವಾನಗಿ ಭೂಮಾಪಕರನ್ನು ಪ್ರತಿದಿನದ ಕೆಲಸಕ್ಕೆ ಅಂದರೆ ಸ್ಕ್ಯಾನಿಂಗ್ ದಾಖಲೆಗಳ ಪರಿಶೀಲನೆ ಕಾರ್ಯಕ್ಕೆ ರೂ. ೩೦೦-೦೦ ಪಾವತಿಸುವುದರ ಮೂಲಕ ಬಳಸಿಕೊಳ್ಳುವುದು. ಈ ಸ್ಕ್ಯಾನಿಂಗ್ ಕಾರ್ಯಕ್ಕೆ ಇಬ್ಬರು ಗ್ರಾಮ ಲೆಕ್ಕಿಗರನ್ನು ಒದಗಿಸಲಾಗುವುದು ಮತ್ತು ಇಲಾಖೆಯ ಲಿಪಿಕ ವರ್ಗದ ಸಿಬ್ಬಂದಿಯನ್ನು ಸಹ ಈ ಕಾರ್ಯಕ್ಕೆ ಬಳಸುವುದು. ಈ ಎಲ್ಲಾ ಸಿಬ್ಬಂದಿಯೂ ಪ್ರತಿ ತಾಲ್ಲೂಕಿನಿಂದ ಸ್ಕ್ಯಾನಿಂಗ್ ಕಾರ್ಯಕ್ಕೆ ನಿಯೋಜಿಸಲ್ಪಡುವ ಭೂಮಾಪಕರ ಅಧೀನದಲ್ಲಿ ಸ್ಕ್ಯಾನಿಂಗ್ ನಡೆಯುವ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಸ್ಕ್ಯಾನಿಂಗ್ ಯೋಜನೆಗೆ ಆಯ್ಕೆಯಾಗಿರುವ ಸಂಸ್ಥೆಗೆ ಸರ್ಕಾರವು ಆದೇಶ ನೀಡಲು ಇನ್ನು ಸ್ವಲ್ಪ ಸಮಯ ಅಗತ್ಯವಿರುವುದರಿಂದ ಅಲ್ಲಿಯವರೆಗೂ ಸ್ಕ್ಯಾನಿಂಗ್ ಕಾರ್ಯಕ್ಕೆ ನಿಯೋಜಿಸಿರುವ ಭೂಮಾಪಕರುಗಳನ್ನು ಸಹ ಟಿಪ್ಪಣಿಗಳ ಪುನರ್ ನಿರ್ಮಾಣದ ಅಳತೆ ಕಾರ್ಯ ನಿರ್ವಹಿಸುವುದು. ಹದ್ದುಬಸ್ತು ಪ್ರಕರಣಗಳು ಮತ್ತು ಕೋರ್ಟ್ ಕಮೀಷನ್ ಅಳತೆಗಳಿಗೆ ಬಳಸಲು ಅವಕಾಶವಿರುತ್ತದೆ.

ಪ್ರತಿ ತಾಲ್ಲೂಕಿಗೆ ಕಾರ್ಯಹಂಚಿಕೆ ಮಾಡಿರುವ ತಾಲ್ಲೂಕು ಭೂಮಾಪಕರಿಗೆ ಇತರೆ ಭೂಮಾಪಕರಿಗೆ ನಿರ್ದಿಷ್ಟ ಪಡಿಸಿರುವಂತೆ ನಿಗದಿತ ಕಾರ್ಯಗಳಿರುವುದಿಲ್ಲ. ಇವರು ಯಾವುದಾದರೂ ತುರ್ತು ಅಳತೆಗಳಿಗೆ ಗ್ರಾಮಗಳಿಗೆ ಭೇಟಿ ನೀಡುವ ಸಮಯದಲ್ಲಿ ಅದೇ ಗ್ರಾಮದ ಅಥವಾ ಅದೇ ದಾರಿಯಲ್ಲಿರುವ ಇತರ ಗ್ರಾಮಗಳ ಅಳತೆ ಕಡತಗಳನ್ನು ಜೊತೆಯಲ್ಲಿ ನಿರ್ವಹಿಸಲು ಸಾಧ್ಯವಾಗುತ್ತದೆ.

ಪ್ರತಿ ಜಿಲ್ಲೆಯಲ್ಲಿಯೂ ಭೂದಾಖಲೆಗಳ ಉಪ ನಿರ್ದೇಶಕರುಗಳಿಗೆ ಒಬ್ಬರು / ಇಬ್ಬರು ಭೂಮಾಪಕರನ್ನು ನೀಡಿದ್ದು, ಇವರಿಗೂ ಸಹ ನಿಗದಿತ ಕೆಲಸಗಳು ಕಡಿಮೆ ಇರುವುದರಿಂದ, ಈ ಭೂಮಾಪಕರನ್ನು ಸಹ ಹೆಚ್ಚಿನ ಒತ್ತಡ ಇರುವ ಸಂದರ್ಭಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳುವುದು.

ಸ್ಕ್ಯಾನಿಂಗ್ ಯೋಜನೆ ಪ್ರಾರಂಭವಾಗುವವರೆಗೂ ಇಬ್ಬರು ಭೂಮಾಪಕರು ಮತ್ತು ಯೋಜನೆ ಪ್ರಾರಂಭವಾದ ನಂತರ ಒಬ್ಬ ಭೂಮಾಪಕರು, ತಾಲ್ಲೂಕು ಭೂಮಾಪಕರು ಮತ್ತು ಭೂದಾಖಲೆಗಳ ಉಪ ನಿರ್ದೇಶಕರ ಕಛೇರಿಯ ಭೂಮಾಪಕರು ( ಅಗತ್ಯವಿರುವ ಸಂದರ್ಭದಲ್ಲಿ ) ಗಳನ್ನು ಒಟ್ಟುಗೂಡಿಸಿ, ಜಮೀನಿಗೆ ಭೇಟಿ ನೀಡಿ ತಯಾರಿಸಬೇಕಾದ ಟಿಪ್ಪಣಿ, ಹದ್ದುಬಸ್ತು ಪ್ರಕರಣಗಳು ಮತ್ತು ಕೋರ್ಟ್ ಕಮೀಷನ್ ಪ್ರಕರಣಗಳನ್ನು ನಿರ್ವಹಿಸಲು ಕೂಡಲೇ ಕ್ರಮ ಜರುಗಿಸುವುದು. ಕೋರ್ಟ್ ಕಮೀಷನ್ ಅಳತೆ ಪ್ರಕರಣಗಳು ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಸ್ವೀಕೃತವಾಗುತ್ತದೆ. ಹದ್ದುಬಸ್ತು ಅಳತೆ ಕೆಲಸಗಳು ಮಾರ್ಚ್ ತಿಂಗಳವರೆಗೆ ಮಾತ್ರ ಬೇಡಿಕೆ ಇರುತ್ತದೆ.

ಇಲಾಖೆಯಲ್ಲಿ ಪ್ರಸ್ತುತ ಇರುವ ಭೂಮಾಪಕರ ಕೊರತೆ ಹಿನ್ನಲೆಯಲ್ಲಿ ಹೊಸದಾಗಿ ಹುದ್ದೆಗಳು ಮಂಜೂರಾಗಿ ನೇಮಕ ಆಗುವವರೆಗೂ ಇಲಾಖೆಯ ಆದ್ಯತೆಯ ಕೆಲಸಗಳಿಗೆ ದಿನಚರಿಯಂತೆ ಕಾರ್ಯ ನಿರ್ವಹಿಸುವ ಬದಲು ಅಗತ್ಯವಿದ್ದಲ್ಲಿ ರಜಾ ದಿನಗಳಲ್ಲಿಯೂ ಕಾರ್ಯ ನಿರ್ವಹಿಸುವುದು ಸದ್ಯದ ಪರಿಸ್ಥಿತಿಯಲ್ಲಿ ಅಗತ್ಯವಾಗಿದೆ. ಹಾಗೂ ಭೂಮಾಪಕರು ಹೆಚ್ಚಿನ ಕಡತಗಳ ಅಳತೆ ಕಾರ್ಯ ನಿರ್ವಹಿಸಿ ಸಹಕರಿಸಬೇಕಾಗಿದೆ. ಆದ್ದರಿಂದ ಕೇವಲ ಅಳತೆಗೆ ಭೇಟಿ ನೀಡಿ ದಿನಚರಿಯಲ್ಲಿ ನಮೂದಿಸದೇ ಕಡತಗಳನ್ನು ಅಳತೆ ನಿರ್ವಹಿಸುವ ಮೂಲಕ ವಿಲೇವಾರಿ ಮಾಡುವುದು. ಹಾಗೂ ಹದ್ದುಬಸ್ತು ಟಿಪ್ಪಣಿ ಪುನರ್ ನಿರ್ಮಾಣದ ಅಳತೆ ಕಡತ, ಸಿ.ಸಿ.ಡಬ್ಲ್ಯು ಅಳತೆ ಗಳನ್ನು ಪ್ರತಿ ತಿಂಗಳೂ ೨೫ ರಿಂದ ೩೦ ಕಡತದ ವರೆಗೆ ವಿಲೇವಾರಿ ಮಾಡಲು ಪ್ರಯತ್ನಿಸುವುದು. ತಾಲ್ಲೂಕು ಭೂಮಾಪಕರು ಸಹ ತಮ್ಮ ಎನ್.ಸಿ.ಆರ್ ಅಳತೆ ಕಡತಗಳೊಂದಿಗೆ ಈ ಮೂರು ರೀತಿಯ ಅಳತೆ ಕಡತಗಳಲ್ಲಿ ಕನಿಷ್ಟ ಒಂದು ಕಡತವನ್ನು ಪ್ರತಿದಿನ ವಿಲೆ ಮಾಡುವುದು

ಭೂದಾಖಲೆಗಳ ಉಪ ನಿರ್ದೇಶಕರುಗಳು ತಮ್ಮ ವ್ಯಾಪ್ತಿಯಲ್ಲಿರುವ ನಗರಮಾಪನ ಕಚೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಭೂಮಾಪಕರನ್ನು ಅಗತ್ಯವಿರುವ ಸಂದರ್ಭಗಳಲ್ಲಿ ತಾಲ್ಲೂಕು ಕಛೇರಿಗಳ ಮೇಲೆ ನಮೂದಿಸಿದ ಮೂರು ರೀತಿಯ ಅಳತೆ ಕೆಲಸಗಳಿಗೆ ಬಳಸುವುದು. ಹಲವು ನಗರಮಾಪನ ಕಚೇರಿಗಳಲ್ಲಿ ಭೂಮಾಪಕರಿಗೆ ಪೂರ್ಣ ಪ್ರಮಾಣದ ಕೆಲಸಗಳಿಲ್ಲ ವಾದ್ದರಿಂದ ವಾರದಲ್ಲಿ ಒಂದು ಬಾರಿ ಅಥವಾ ಎರಡು ಬಾರಿ ನಗರಮಾಪನ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುವ ಸೂಚನೆಯೊಂದಿಗೆ ಉಳಿದಂತೆ ವ್ಯಾಪ್ತಿಯ ತಾಲ್ಲೂಕುಗಳಲ್ಲಿ ಮೇಲೆ ವಿವರಿಸಿರುವ ಅಳತೆ ಕಾರ್ಯ ನಿರ್ವಹಿಸಲು ಸೂಚನೆ ನೀಡುವುದು.

ಭೂದಾಖಲೆಗಳ ಉಪ ನಿರ್ದೇಶಕರುಗಳು ತಮ್ಮ ವ್ಯಾಪ್ತಿಯ ತಹಶೀಲ್ದಾರ್‌ರೊಂದಿಗೆ ಸ್ಕ್ಯಾನಿಂಗ್ ಕೆಲಸ ಪ್ರಾರಂಭವಾದ ನಂತರ ಸೀಮಿತವಾಗಿ ಇಬ್ಬರು ಸ್ಕ್ಯಾನಿಂಗ್ ಗೆ ನಿಯೋಜಿಸಿರುವ ಭೂಮಾಪಕರ ಪೈಕಿ ಯಾವ ಭೂಮಾಪಕರನ್ನು ಮೇಲೆ ವಿವರಿಸಿರುವ ಕೆಲಸಕ್ಕೆ ಮತ್ತು ಯಾವ ಭೂಮಾಪಕರನ್ನು ಹದ್ದುಬಸ್ತು ಇತರೆ ಕೆಲಸಕ್ಕೆ ನಿಯೋಜಿಸಬೇಕು ಎಂಬುವ ಬಗ್ಗೆ ಸಮಾಲೋಚಿಸಿ ಕೂಡಲೇ ನಿಯೋಜನೆಗೆ ಕ್ರಮ ವಹಿಸುವುದು. ಮೇಲೆ ವಿವರಿಸಿರುವಂತೆ ಆದ್ಯತೆಯ ಮೇಲೆ ಕಡತಗಳನ್ನು ಅಳತೆಗೆ ಒಳಪಡಿಸುವ ಬಗ್ಗೆ ತಹಸೀಲ್ದಾರ್ ಮತ್ತು ವ್ಯಾಪ್ತಿಯ ಎಲ್ಲಾ ಭೂಮಾಪಕರಿಗೆ ಮನವರಿಕೆ ಮಾಡಿಕೊಟ್ಟು ದೂರುಗಳಿಗೆ ಅವಕಾಶ ನೀಡದಂತೆ ಕ್ರಮ ವಹಿಸುವುದು. ಈ ಸುತ್ತೋಲೆಯಲ್ಲಿ ನಮೂದಿಸಿರುವ ಮೂರು ರೀತಿಯ ಅಳತೆ ಪ್ರಕರಣಗಳ ಬಗ್ಗೆ ಅದರಲ್ಲಿಯೂ ವಿಶೇಷವಾಗಿ ಟಿಪ್ಪಣಿ ಪುನರ್ ನಿರ್ಮಾಣ ಮಾಡಿ ನಿಗದಿತ ಕಾಲ ಮಿತಿಯಲ್ಲಿ ಸಾರ್ವಜನಿಕರಿಗೆ ಸೇವೆ ಒದಗಿಸುವ ಕಾರ್ಯವು ಭೂದಾಖಲೆಗಳ ಉಪ ನಿರ್ದೇಶಕರವರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ. ಟಿಪ್ಪಣಿಗಳ ಪುನರ್ ನಿರ್ಮಾಣದ ಕಾರ್ಯವನ್ನು ಪ್ರತಿ ತಾಲ್ಲೂಕುಗಳಲ್ಲಿಯೂ ವಿಳಂಬಕ್ಕೆ ಅವಕಾಶ ನೀಡದೆ ಸಾರ್ವಜನಿಕರಿಗೆ ಒದಗಿಸುವಲ್ಲಿ ದೂರುಗಳು ಬಂದಲ್ಲಿ ತಹಶೀಲ್ದಾರ್ ಮತ್ತು ಭೂದಾಖಲೆಗಳ ಉಪ ನಿರ್ದೇಶಕರುಗಳನ್ನು ಜವಾಬ್ದಾರರನ್ನಾಗಿ ಮಾಡಲಾಗುವುದು.

ಸಹಿ/-
(ರಾಜೀವ್ ಚಾವ್ಲಾ)
ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಬೆಂಗಳೂರು.

ಪ್ರತಿಯನ್ನು:-

1. ಎಲ್ಲಾ ವಿಭಾಗದ ಪ್ರಾದೇಶಿಕ ಆಯುಕ್ತರುಗಳಿಗೆ ಮಾಹಿತಿಗಾಗಿ.
2. ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಎಲ್ಲಾ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಎಲ್ಲಾ ತಹಶೀಲ್ದಾರ್ ಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಈ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
8. ಅಧ್ಯಕ್ಷರು/ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಭೂಮಾಪನಾ ಇಲಾಖಾ ಕಾರ್ಯನಿರ್ವಾಹಕ ನೌಕರರ ಸಂಘ(ರಿ), ಬೆಂಗಳೂರು ರವರ ಮಾಹಿತಿಗಾಗಿ.
9. ಪಿ.ಎಂ.ಯು ಘಟಕ, ಕೇಂದ್ರ ಕಛೇರಿ.

ಆಯುಕ್ತರ ಪರವಾಗಿ,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಬೆಂಗಳೂರು.